ಕ್ರಿಸ್ತು ಜಯಂತಿ ಕನ್ನಡ ಸಂಶೋಧನಾ ಪತ್ರಿಕೆ
(Kristu Jayanti Kannada Sanshodhana Patrike)
ಸಂಪುಟ 1, ಸಂಚಿಕೆ 2, ಸೆಪ್ಟಂಬರ್ 2022, ಪುಟಗಳು 1 – 10

# ಛಲವಾದಿ ಸಮುದಾಯದ ಪಾರಂಪರಿಕ ಹಿನ್ನೋಟ ಹಾಗೂ ವಾಸ್ತವ ಸ್ಥಿತಿ

**ಪ್ರೊ. ಚಂದ್ರಶೇಖರ್. ಎನ್.**
ಸಹಾಯಕ ಪ್ರಾಧ್ಯಾಪಕರು
ಕ್ರಿಸ್ತು ಜಯಂತಿ ಕಾಲೇಜು (ಸ್ವಾಯತ್ತ), ಬೆಂಗಳೂರು
chandrashekar.n@kristujayanti.com

ಪ್ರಜಾಪ್ರಭುತ್ವ ಪರಿಕಲ್ಪನೆಯನ್ನು ಒಳಗೊಂಡ ಭಾರತ ಜಾತಿಗಳಿಂದ ಕೂಡಿದ ಜಾತ್ಯತೀತ ರಾಷ್ಟ್ರ. ಇಲ್ಲಿ ಜಾತ್ಯತೀತ ಎಂಬುದು ವಾಸ್ತವವಾಗಿ ಯಾವುದೇ ಒಂದು ಧರ್ಮ, ವರ್ಣ ಮತ್ತು ವರ್ಗದ ಕಟ್ಟುಪಾಡುಗಳಿಗೆ ಅಧೀನವಾಗದ ಸಾರ್ವತ್ರಿಕ ದೃಷ್ಟಿಕೋನವನ್ನು ಹೊಂದಿದ ಸ್ಥಿತಿಯಾಗಿದೆ. ಆದರೆ ಅದಕ್ಕೆ ವ್ಯತಿರಿಕ್ತವೆಂಬಂತೆ ಈ ನೆಲದಲ್ಲಿ ನಾವು ಕಂಡುಂಡ ವೈವಿಧ್ಯಮಯ ಅನುಭವಗಳು ಚಾರಿತ್ರಿಕ, ಪೌರಾಣಿಕ, ಆಧ್ಯಾತ್ಮಿಕ, ಧಾರ್ಮಿಕ ಸಾಮಾಜಿಕ, ಹಾಗೂ ರಾಜಕೀಯ ಹಿನ್ನೆಲೆಯಿಂದ ಬಹಳ ಭಿನ್ನವಾದದ್ದು ಮತ್ತು ಆಚರಣೆಯ ರೂಪದಲ್ಲಿ ಅಷ್ಟೇ ಜಟಿಲವಾದದ್ದೂ ಆಗಿದೆ ಎಂಬುದರಲ್ಲಿ ಅತಿಶಯೋಕ್ತಿಯಿಲ್ಲ. ಆ ಕಾರಣದಿಂದಲೇ ಇಂದಿಗೂ ಶ್ರೇಷ್ಠತೆಯ ಕುಲಮದದಿಂದ ಹೊರಬರಲಾಗದ ಕೆಲವಾರು ಜಾತಿಗಳು ಬಹುಸಂಖ್ಯಾತರಾದ ಹಲವಾರು ಜಾತಿಗಳ ವಿರುದ್ಧ ತಮ್ಮ ಅಸ್ತಿತ್ವಕ್ಕಾಗಿ ಹಸಿದ ಹೆಬ್ಬಾವುಗಳಂತೆ ಬುಸುಗುಡುತ್ತಿವೆ.

ಜಾತಿಯೆನ್ನುವುದು ತಮ್ಮ ಇರುವಿಕೆಯ ಅಸ್ಮಿತೆಯಾಗಿ ರೂಪುಗೊಳ್ಳುತ್ತಿರುವುದನ್ನು ಆಧುನಿಕ ದಿನಮಾನಗಳಲ್ಲಿ ಕಾಣಬಹುದು. ಅದೂ ಕೂಡಾ ಪರಂಪರೆಯ ಹೆಜ್ಜೆಗುರುತುಗಳನ್ನು ಹುಡುಕುತ್ತಾ ಮತ್ತೆ ಸಮಾಜದ ಕಣ್ಣುಗಳಿಗೆ ಜಾತಿಯೆಂಬ ಮಹತ್ತಿನ ಸೂಜಿಗಳಿಂದ ಚುಚ್ಚಿ ಅಂಧಕಾರಕ್ಕೆ ನೂಕುವ ಕೆಲಸ ಮಾಡುತ್ತಿರುವುದು ವಿಪರ್ಯಾಸವೇ ಸರಿ. ಇದಕ್ಕೆ ನಿಖರವಾದ ಕಾರಣ ಹುಡುಕ ಹೊರಟಾಗ ಮತ್ತೆ ನಾವು ನಮ್ಮ ಪೂರ್ವಸೂರಿಗಳು ಮತ್ತು ಪುರಾಣಗ್ರಂಥಗಳತ್ತ ಮುಖಮಾಡಿ ನಿಲ್ಲಬೇಕಾಗುತ್ತದೆ. ಹೌದು! ಅಂದೆಂದೋ ಸಂಪ್ರದಾಯವಾದಿಗಳು ತಾವು ಹುಟ್ಟುಹಾಕಿದ ನಂಬಿಕೆಗಳಿಗೆ, ಆಚರಣೆಗಳಿಗೆ ಅಜೀವ ಸದಸ್ಯರಾದ ಅದೆಷ್ಟೋ ಸಾಂಸ್ಕೃತಿಕ ರಾಯಭಾರಿಗಳಲ್ಲಿ ಛಲವಾದಿ ಸಮುದಾಯವು ಪ್ರಧಾನವಾದ ಮತ್ತು ಪ್ರಬಲ ಜನಾಂಗವಾಗಿ ಕರ್ನಾಟಕದಲ್ಲಿದೆ. ಹಾಗೆಯೇ ನೆರೆಯ ಆಂಧ್ರಪ್ರದೇಶದಲ್ಲಿ ಮಾಲ, ಮಹಾರಾಷ್ಟ್ರದಲ್ಲಿ ಮಹರ್, ತಮಿಳುನಾಡಿನಲ್ಲಿ ಪರಿಯನ್, ಕೇರಳದಲ್ಲಿ ಪುಲಯನ್ ಎಂಬ ಹೆಸರುಗಳಿಂದ ಕರೆಯಲ್ಪಡುವ

ದಲಿತ ಸಮುದಾಯಗಳು ಸಾಮಾಜಿಕ, ರಾಜಕೀಯ ಮತ್ತು ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಪಲ್ಲಟಗಳಿಗೆ ಒಳಗಾಗಿ ಬಹು ದೊಡ್ಡ ಹಿಂಬೀಳುವಿಕೆಯನ್ನು ಅನುಭವಿಸಿರುವುದನ್ನು ಇತಿಹಾಸದುದ್ದಕ್ಕೂ ಕಾಣಬಹುದು.

ಸ್ವಾತಂತ್ರ್ಯಪೂರ್ವದಿಂದಲೂ ಈ ಸಮುದಾಯ ಕೃಷಿ ಚಟುವಟಿಕೆಗಳನ್ನು ಮಾಡುತ್ತಾ ಬಂದಿದ್ದು ಇಂದಿಗೂ ಭೂಮಿಯ ನಂಟನ್ನು ಹೊಂದಿರುವವರಿದ್ದಾರೆ. ಅಂತೆಯೇ ಬ್ರಿಟೀಷ್ ಆಳ್ವಿಕೆಯಲ್ಲಿ ಈ ಸಮುದಾಯ ವ್ಯಾಪಾರದಲ್ಲೂ ತೊಡಗಿಸಿಕೊಂಡಿದ್ದುಂಟು. ಅಲ್ಲದೆ ಬಟ್ಟೆಯ ನೇಯ್ಗೆ ಕಾರ್ಯವನ್ನೂ ಸುದೀರ್ಘವಾಗಿ ಮಾಡಿಕೊಂಡು ಬರುತ್ತಿರುವ ಕುಟುಂಬಗಳನ್ನು ಈಗಲೂ ಕಾಣಬಹುದಾಗಿದೆ. ನೇಕಾರ ವೃತ್ತಿಯ ತಲ್ಲಣಗಳೇನೆಂಬುದನ್ನು ಆಧುನಿಕ ದಿನಮಾನಗಳಲ್ಲಿ ನಾವು ಕಂಡಿದ್ದೇವೆ. ಆದರೆ ಅಂದಿನ ಸನ್ನಿವೇಶದಲ್ಲಿ ತಂತ್ರಜ್ಞಾನದ ಸ್ಪರ್ಶವೇ ಇಲ್ಲದೆ ಕೇವಲ ಮಾನವ ಶ್ರಮದ ಮೂಲಕ ತಮ್ಮ ಕಸುಬನ್ನು ಮಾಡುತ್ತಿದ್ದ ಈ ಸಮುದಾಯವನ್ನು ಮಗ್ಗದ ಹೊಲೆಯರು ಎಂತಲೇ ಕರೆಯುವುದು ಇಂದಿಗೂ ವಾಡಿಕೆ. ಉಳ್ಳವರ ಮೈ–ಮಾನ ಮುಚ್ಚಲು ತಾವು ಬೆತ್ತಲಾದ ಪರಿಯನ್ನು ಮರೆಯಲಾಗದು.

ಭಾಷಿಕ ಅಧ್ಯಯನ ಯೂರೋಪಿನಲ್ಲಿ ತೌಲನಿಕ ಭಾಷಾಶಿಸ್ತು ಬೆಳೆಯಲು ಸಹಾಯಮಾಡಿದಂತೆ ಯುರೇಶಿಯಾದ ಪ್ರಾಚೀನ ಚರಿತ್ರೆಯ ಮರು ಓದಿಗೂ ದಾರಿ ಮಾಡಿಕೊಟ್ಟಿತು. ಸಂಸ್ಕೃತದ ಅಧ್ಯಯನ ಹಾಗೂ ಭಾರತದಲ್ಲಿನ ಜನಾಂಗ ಲಕ್ಷಣವು ಮಾನವ ಸಮಾಜದ ಹೊಸ ದೃಷ್ಟಿಕೋನವಾಗಿ ಹೊರಹೊಮ್ಮುತ್ತಿದ್ದ 'ಕುಲವಿಜ್ಞಾನ'ವೆಂಬ ಜ್ಞಾನಶಿಸ್ತಿಗೆ ಎಡೆಮಾಡಿಕೊಟ್ಟಿತು. 'ಕುಲ' ಎನ್ನುವುದು ಯೂರೋಪಿನ ಆವಿಷ್ಕಾರವಾಗಿದ್ದು, ಲೀನಿಯಸ್ ಮಾಡಿದ ಸಸ್ಯಗಳ ವರ್ಗೀಕರಣ ಹಾಗೂ ಯೂರೋಪಿಯನ್ನರು ತಮ್ಮ ಶ್ರೇಷ್ಠತೆಯ ಹಕ್ಕು ಸಾಧನೆ ಮಾಡಿಕೊಳ್ಳಲು ಬಳಸಿಕೊಂಡ ನಿರಂಕುಶತೆಯ ಮಾದರಿಗಳಿಂದ ಹುಟ್ಟಿಕೊಂಡಿರುವಂತಹದ್ದು.

ಕುಲದ ನಡೆ ನುಡಿಯ ರೀತಿಯನ್ನು ಅನಂತರದಲ್ಲಿ ಅಳವಡಿಸಿಕೊಂಡ ಸಾಮಾಜಿಕ ವ್ಯವಹಾರಗಳು ಬ್ರಿಟೀಷರು ತಮ್ಮ ಸಾಮ್ರಾಜ್ಯದೆಡೆಗೆ ತೋರಿದ ದಾರಿಯನ್ನು ನಿಶ್ಚಯಿಸಿದವು. ಪಾರಂಪರಿಕ ಕುಲೀನರನ್ನು ಜನಾಂಗೀಯವಾಗಿ ಮೇಲು ಎಂದು ಪರಿಗಣಿಸಿ ಅವರ ಸ್ಥಾನವನ್ನು ಉನ್ನತ ದರ್ಜೆಗೇರಿಸಲಾಯಿತು.

**ಛಲವಾದಿ ಸಮುದಾಯದ ಪೌರಾಣಿಕ ಹಿನ್ನೆಲೆ**

ಅಕ್ಷರ, ವಿದ್ಯೆಯಿಲ್ಲದ ಶ್ರಮಮೂಲ ಸಂಸ್ಕೃತಿಯ ಪ್ರತಿಯೊಂದು ಜನಾಂಗ ತಾವೆಷ್ಟು ಪ್ರಾಚೀನ ಎಂಬುದನ್ನು ಕುಲಪುರಾಣಗಳ ಮೂಲಕ ವ್ಯಕ್ತಪಡಿಸುತ್ತಿರುತ್ತವೆ. ಕುಲ ಅಥವಾ ಸೃಷ್ಠಿ ಪುರಾಣಗಳಿಲ್ಲದ ಜನಸಮುದಾಯವಿದ್ದರೆ ಅದು ಸಾಂಸ್ಕೃತಿಕವಾಗಿ ಬರಡಾಗಿರುತ್ತದೆ, ತಮ್ಮ ಕುಲದ ಶ್ರೇಷ್ಠತೆಯನ್ನು, ಅದರ ಅನನ್ಯತೆಯನ್ನು ಕಾಪಾಡಿಕೊಳ್ಳುತ್ತಾ ಇನ್ನೊಂದು ಸಮುದಾಯದ ಜೊತೆಗೆ ಮಾನವೀಯವಾಗಿ ವರ್ತಿಸುವುದೇ ಕುಲಾಚಾರ ಪದ್ದತಿ. ಛಲವಾದಿ ಸಂಸ್ಕೃತಿಗೆ ಭವ್ಯ ಪೌರಾಣಿಕ ಹಿನ್ನೆಲೆಯಿದ್ದು ಅದನ್ನು ಮರೆಯಾಗಿಸಿ ಅದರ ಮೇಲೆ ಇಚ್ಚಿತ ಮೌಲ್ಯಗಳನ್ನು ಬಿತ್ತಿದರು. ಚತುರ್ವರ್ಣಾಶ್ರಮವು ಧರ್ಮಗಳನ್ನು ಸೃಷ್ಠಿಸಿ ಕುಯುಕ್ತಿಯಿಂದ ವೃತ್ತಿಗಳು ವಂಶಪಾರಂಪರಿಕವಾಗುವಂತೆ ಮಾಡಿ ಛಲವಾದಿಗಳು ಕುಲವೃತ್ತಿಗೆ ಒಳಗಾಗುವಂತಾಯಿತು.

ಶಿಷ್ಟವರ್ಗ ಹಲವು ಪೌರಾಣಿಕ ಗ್ರಂಥಗಳನ್ನು ರಚಿಸಿ ಅವುಗಳನ್ನು ಭದ್ರವಾಗಿ ರಕ್ಷಿಸಿದರು ಇತರರನ್ನು ನಿರ್ಲಕ್ಷಿಸಿದರು ಅದರಲ್ಲಿ ಇವರೂ ಒಬ್ಬರು. ಭಾರತದ ಮೂಲ ನಿವಾಸಿಗಳಾಗಿ ದ್ರಾವಿಡ ಸಂಸ್ಕೃತಿಯನ್ನು ಹೊಂದಿದವರಾಗಿ, ವೇದಾತೀತನಾದ ಶಿವನನ್ನು ತಮ್ಮ ಆರಾಧ್ಯ ದೈವವಾಗಿ ನಂಬಿ, ಆದಿಶೈವ ಭಕ್ತರಾಗಿ ಬೆಳೆದು ಬಂದ ಪುರಾತನ ಜನಾಂಗವೇ ಛಲವಾದಿ ಜನಾಂಗ. ಇವರು ಶಿವ ಸಂಪ್ರದಾಯ ಪರಿಪಾಲಕರು, ಶೈವ ಸಂಪ್ರದಾಯದಲ್ಲಿ ಸೃಷ್ಠಿಕರ್ತನಾದ ಶಿವನನ್ನು ಆರಾಧಿಸುವವರಲ್ಲಿ ಕಾಳಾಮುಖ ಮತ್ತು ಕಾಪಾಲಿಕ ಸಂಪ್ರದಾಯಗಳಿರುತ್ತವೆ. ಅದರಲ್ಲಿ ಕಾಳಾಮುಖಿಗಳು–ಬ್ರಹ್ಮಚರ್ಯ, ವ್ರತ, ಯೋಗಾಭ್ಯಾಸ, ಸದಾಚಾರಗಳಿಂದ ಲಿಂಗಪೂಜೆ ಮಾಡತೊಡಗಿದರು. ಆದರೆ ಕಾಪಾಲಿಕರು– ಕಾಳಭೈರವನ ಆರಾಧಕರಾಗಿ ದೇವರ ಹೆಸರಿನಲ್ಲಿ ಪ್ರಾಣಿ ಬಲಿ ನೀಡಿ ಕಾಳಿ, ಚಾಮುಂಡಿ, ಶಕ್ತಿ, ದುರ್ಗೆ ಮುಂತಾದ ಹೆಸರುಗಳಿಂದ ಪಾರ್ವತಿಯನ್ನು ಆರಾಧಿಸುತ್ತಿದ್ದರು.

ಇಂದಿಗೂ ಈ ಜನಾಂಗ ಕಾಪಾಲಿಕ ಸಂಪ್ರದಾಯಗಳನ್ನು ತಮ್ಮ ಸಂಸ್ಕೃತಿಯಲ್ಲಿ ಉಳಿಸಿಕೊಂಡು ಬಂದಿದ್ದಾರೆ. ವಿವಿಧ ವಾದ್ಯಕಾರರಾಗಿದ್ದ ಛಲವಾದಿಗಳು ಕಾಲಾನಂತರ ಭಾರತದ ಅದರಲ್ಲೂ ದಕ್ಷಿಣ ಭಾರತದಲ್ಲಿ ಶೈವಾಚಾರಿಗಳಾದ ಛಲವಾದಿಗಳ ಮೇಲೆ ಶಂಕರಾಚಾರ್ಯ ಮತ್ತು ರಾಮಾನುಜಾಚಾರ್ಯರ ಪ್ರಭಾವವಾಯಿತು. ಆಗ ಶಿವನ ಜೊತೆ ನಾರಾಯಣನ ಪೂಜೆ ಮಾಡಲು ತೊಡಗಿದರು ಅಲ್ಲಿಂದ ಇವರಲ್ಲಿ ಹರಿ–ಹರನೆಂಬ ಭೇದ ತೊಲಗಿ ಏಕದೈವ ಸಂಪ್ರದಾಯ ಶುರುವಾಯಿತು ಅಂದರೆ ಇವರ ಮನೆ ದೇವರುಗಳು ಶಿವ ಮತ್ತು ನಾರಾಯಣ ಸಂಕೇತವಾಗಿರುವುದನ್ನು ಕಾಣಬಹುದು. ಇವರು ದೇಶದಾದ್ಯಂತ ಶಿವನನ್ನು ಆರಾಧಿಸುವಲ್ಲಿ ಬಸವ, ಲಿಂಗಮುದ್ರೆಯಿರುವ ಗಂಟೆ ಬಟ್ಟಲು, ಕಹಳೆ, ಮುಕುಟವಾದ್ಯಗಳಾದ ಸೂರ್ಯವಾದ್ಯ ಮತ್ತು ಚಂದ್ರವಾದ್ಯಗಳನ್ನು ನುಡಿಸುತ್ತಿದ್ದು ಹೆಚ್ಚು ಬಿಳಿಯ ವಸ್ತ್ರಗಳನ್ನು ಧರಿಸುತ್ತಿದ್ದರು.

ಇವರಿಗೆ ಯಾವುದೇ ಷಟ್ ಕರ್ಮಾಚರಣೆಗಳು ಇಲ್ಲದಿರುವುದರಿಂದ ಇವರನ್ನು ಏಕದೇವೋಪಾಸಕರೆಂದು ಪರಿಗಣಿಸಿ ಇವರು ವೈದಿಕ ಧರ್ಮದಡಿಯಲ್ಲಿ ಬರುವ ವರ್ಗವಲ್ಲವೆಂಬುದು ಅವರ ಪೌರಾಣಿಕ ಹಿನ್ನೆಲೆ, ನಾಗರೀಕತೆ ಮತ್ತು ಸಂಸ್ಕೃತಿಯಿಂದ ತಿಳಿದು ಬರುತ್ತದೆ. ಆದರೆ ಸಂಪ್ರದಾಯವಾದಿಗಳ ಒತ್ತಡದಿಂದ ಇವರ ಮುಗ್ಧತೆ ಮತ್ತು ಸೇವಾನಿಷ್ಠೆ ದುರುಪಯೋಗವಾಗಿ ಅಂಚಿಗೆ ತಳ್ಳಲ್ಪಟ್ಟವರಂತೆ ಇನ್ನೂ ಊರ ಹೊರಕೇರಿಗಳಲ್ಲಿ ಬದುಕುತ್ತಿದ್ದಾರೆ.

**ಛಲವಾದಿ ಪದ ವ್ಯುತ್ಪತ್ತಿ**

ಕೋಲಾರ/ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಈ ಜನಾಂಗದವರನ್ನು ಹೊಲೆಯರು, ಬಲಗೈಯವರು, ಆದಿಕರ್ನಾಟಕ, ಆದಿದ್ರಾವಿಡ, ಸಲಾದೋಳ್ಳು, ಚಲವಾದುಲು, ಮಾಲೋಳ್ಳು ಎಂದು ಕರೆಯುತ್ತಾರೆ. ಎಲ್ಲಾ ಹೊಲೆಯರು ಛಲವಾದಿಗಳಲ್ಲ ಆದರೆ ಛಲವಾದಿಗಳೆಲ್ಲಾ ಹೊಲೆಯರೇ ಆಗಿದ್ದಾರೆ. ಚಲುವಾದಿ ಎಂದರೆ ದೃಢ ಸಂಕಲ್ಪವಿರುವವನು, ಕುಳವಾಡಿಗಳೆಂದು, ಸಲಾದಿ, ಚೆನ್ನಯ್ಯ ಮುಂತಾಗಿ ಕರೆಯುತ್ತಾರೆ.

ಶಿವನ ಛಲ ತೀರಿಸಲು ಹುಟ್ಟಿ ಬಂದವನಾದ್ದರಿಂದ ಶಿವಾಂಶ ಸಂಭೂತನಾದ ಛಲದಂಕ ಮಲ್ಲನ ವಂಶದವರಾದ್ದರಿಂದ ಅವರನ್ನು ಛಲಕ್ಕೆ ಛಲವಾದಿ ಎಂದು ಪುರಾಣಗಳಲ್ಲಿ ಕರೆದಿರುವುದನ್ನು ಕಾಣಬಹುದು. ನಮ್ಮ ಜಿಲ್ಲೆಯಲ್ಲಿ ಇವರನ್ನು ಸಲಾದೋಳ್ಳು, ಮಾಲೋಳ್ಳು, ಹೊಲೆಯರೆಂದು, ದಾಖಲೆಗಳಲ್ಲಿ ಆದಿಕರ್ನಾಟಕ ಅಥವಾ ಆದಿದ್ರಾವಿಡರೆಂದು ಕಾಣಬಹುದು. ಇದಕ್ಕೆ ಕಾರಣವೇನೆಂದರೆ 1919 ರಲ್ಲಿ ದಕ್ಷಿಣ ಭಾರತದಲ್ಲಿ ಪ್ರಾಂತೀಯ ಸರ್ಕಾರಗಳಲ್ಲಿ ಏಕಮಾದರಿ ಮೀಸಲಾತಿ ಜಾರಿಯಾಗಿ 1922 ರಲ್ಲಿ ಮದ್ರಾಸ್ ಪ್ರಾಂತ್ಯ ಕನ್ನಡ ಭಾಷೆ ಮಾತನಾಡುವವರು ಆದಿಕರ್ನಾಟಕವೆಂತಲೂ, ತಮಿಳು/ಮಲೆಯಾಳಂ ಭಾಷಿಕರನ್ನು ಆದಿದ್ರಾವಿಡ, ತೆಲುಗು ಭಾಷಿಕರನ್ನು ಆದಿಆಂಧ್ರ ಎಂದು ಶಾಸಕಾಂಗ ಸಭೆ ನಾಮಕರಣ ಮಾಡಿತು. ಆದರೆ 1931 ರಲ್ಲಿ ಅಂಬೇಡ್ಕರರ ಪ್ರಭಾವಕ್ಕೊಳಗಾಗಿ ದಲಿತರು ಸಂಘಟಿತರಾದರು ಅಂದಿನಿಂದ ಜಾತಿಸೂಚಕ ಮತ್ತು ನಿಂದನಾ ಪದಗಳಿಂದ ಸಮುದಾಯಗಳನ್ನು ಗುರುತಿಸದಿರಲು ತೀರ್ಮಾನಿಸಿದರು.

**ಛಲದಂಕ ಮಲ್ಲನ ಪರಂಪರೆ**

ಹಿಂದೆ ಸುರರು, ಯಕ್ಷರು, ಪ್ರಯಾಗದಲ್ಲಿ ಮಹಾಯಾಗ ಮಾಡುತಿರಲು ಅದರ ಅಧ್ಯಕ್ಷತೆಯನ್ನು ಶಿವನು ವಹಿಸಿಕೊಳ್ಳುತ್ತಾನೆ. ಬ್ರಹ್ಮ, ವಿಷ್ಣುವಿನ ಆದಿಯಾಗಿ ಬ್ರಹ್ಮಾಂಡಾಧಿಪತಿಯಾದ ದಕ್ಷಬ್ರಹ್ಮನೂ ಆಕಸ್ಮಿಕವಾಗಿ ಆಗಮಿಸುತ್ತಾನೆ. ಎಲ್ಲರೂ ಅವನಿಗೆ ನಮಸ್ಕರಿಸುತ್ತಾರೆ ಶಿವ ಮಾತ್ರ ಮೌನವಾಗಿರುತ್ತಾನೆ ಅದಕ್ಕೆ

ಕೋಪಗೊಂಡ ದಕ್ಷಬ್ರಹ್ಮ ಶಿವನಿಗೆ ಯಾವ ಯಜ್ಞದಲ್ಲೂ ಪ್ರವೇಶವಿಲ್ಲದೆ ಜಾತಿ, ಕುಲ ಗೋತ್ರವಿಲ್ಲದ ಸ್ಮಶಾನವಾಸಿಯಾಗಿ ಅಪವಿತ್ರನಾಗೆಂದು ಶಾಪಕೊಟ್ಟನು. ಪ್ರತ್ಯುತ್ತರವಾಗಿ ಶಿವ ಅವನಿಗೆ ಹೇಳಿದ, ನಾನು ಸೃಷ್ಠಿ ಲಯಕ್ಕೆ ಕರ್ತನೆಂಬುದು ನಿನಗೆ ತಿಳಿಯದೇ ಎಂದಾಗ ಮತ್ತೆ ದಕ್ಷ ಶಿವನಿಗೆ ನಾಸ್ತಿಕರಾಗಿ ಮದ್ಯಪಾನಾದಿಗಳನ್ನು ಮಾಡುತ್ತಾ ಅಪವಿತ್ರ ಮೂಳೆ ಧರಿಸಿ ಎಂದು ಶಾಪವಿತ್ತನು.

ಆಗ ಶಿಲಾದನ ಮಗನಾದ ನಂದಿಯು ದಕ್ಷನಿಗೆ ಕ್ರೋಧ, ಲೋಭ, ಮದಗಳಿಂದ ಭಿಕ್ಷುಕರಾಗಿ ,ಮರ್ಯಾದೆಯಿಲ್ಲದವರಾಗಿ ವೇದ ಮಾರ್ಗದಿಂದ ಶೂದ್ರರಿಗೆ ಕರ್ಮಗಳನ್ನು ಮಾಡಿಸಿ ಅವರಿಂದ ದುರ್ದಾನಗಳನ್ನು ಪಡೆದು ದರಿದ್ರರಾಗಿ ಎಂದು ಮರು ಶಾಪವಿತ್ತನು. ನಂತರ ದಕ್ಷಬ್ರಹ್ಮ ಯಾಗ ಕೈಗೊಂಡು ಶಿವನನ್ನು ಕರೆಯದಿರುವಾಗ ಇದನ್ನು ಗಮನಿಸಿದ ದಧೀಚ ಮುನಿ ಶಿವನಿಲ್ಲದ ಕಾರ್ಯ ಅಪೂರ್ಣವೆಂದನು. ನಂತರ ದಕ್ಷನ ಮಗಳು ಶಿವನ ಪತ್ನಿ ಸತಿದೇವಿ ಈ ಯಜ್ಞಕ್ಕೆ ಹೋಗಿ ತಂದೆಯಿಂದ ಅವಮಾನಿತಳಾಗಿ ಅಗ್ನಿಗೆ ಆಹುತಿಯಾಗುತ್ತಾಳೆ ಆ ಸಂದರ್ಭದಲ್ಲಿ ಸತಿದೇವಿಯು ಆಕಾಶಕ್ಕೆ ದೃಷ್ಠಿ ನೆಟ್ಟಿದ್ದರ ಫಲವಾಗಿ ಜನಿಸಿದವನೇ ನಂದಿಜ ಅಥವಾ ಛಲದಂಕಮಲ್ಲ. ಆಗ ಆಕಾಶದಲ್ಲಿ ಉದ್ಭವಿಸಿದ ದೃಢಕಾಯದ ಪುರುಷಾಕೃತಿಯು ಶಿವನಾಮ ಸ್ಮರಣೆ ಮಾಡುತ್ತಾ ಆಗಬೇಕಾದ ಕಾರ್ಯದ ಬಗ್ಗೆ ಕೇಳಿತು ಅದನ್ನು ಕಂಡ ನಂದೀಶ್ವರನು ಅವನಿಗೆ 'ಛಲದಂಕ ಮಲ್ಲ' ನೆಂದು ಹೆಸರಿಡುತ್ತಾನೆ ಹಾಗೂ ಅವನಿಗೆ ಒಂದು ಗದೆ ಕೊಟ್ಟು ದಕ್ಷನನ್ನು ಸಂಹರಿಸಲು ಹೇಳುತ್ತಾನೆ.

ಇದರಿಂದ ಭಯಗೊಂಡ ದಕ್ಷಬ್ರಹ್ಮ ಭೃಗಮುನಿ ಹಾಗೂ ವಿಷ್ಣುವಿನ ಆಶ್ರಯ ಪಡೆದು ನಂದಿ ಮತ್ತು ಛಲದಂಕನ ಮೇಲೆ ಯುದ್ಧ ಮಾಡುವರು. ಇತ್ತ ಸತಿದೇವಿಯ ಸಾವಿನ ಸುದ್ಧಿ ತಿಳಿದ ಶಿವನು ತನ್ನ ಜಟೆಯನ್ನು ಗಿರಿವೃಂದಕ್ಕೆ ಅಪ್ಪಳಿಸಿ ಅದರಿಂದ ವೀರಭದ್ರ ಮತ್ತು ಮಹಾಕಾಳಿಯ ಜನನವಾಗಿ ಇವರು ನಂದಿ ಮತ್ತು ಛಲದಂಕನ ಜೊತೆ ಸೇರಿ ಹರಿ–ಇಂದ್ರಾದಿಗಳೊಂದಿಗೆ ಹೋರಾಡಿದರು. ವಿಷ್ಣುವಿಗೆ ಸೋಲಾಗುವುದನ್ನು ಕಂಡು ತನ್ನ ಚಕ್ರವನ್ನು ಪ್ರಯೋಗಿಸಿದನು, ಕ್ಷೇತ್ರಪಾಲನೆಂಬುವನು ಆ ಚಕ್ರವನ್ನು ನುಂಗಿದನು ನಂತರ ಹರಿ ಅದನ್ನು ವೀರಭದ್ರನ ಮೇಲೆ ಬಳಸಿದನು. ವೀರಭದ್ರನು ಶಿವಸ್ಮರಣೆ ಮಾಡಿ ತ್ರಿಶೂಲವನ್ನು ಹರಿಯ ಎದೆಗೆ ನಾಟಿಸಿ ಮೂರ್ಚೆಗೊಳಿಸಿದನು, ಕೊನೆಗೆ ವೀರಭದ್ರನು ದಕ್ಷಬ್ರಹ್ಮನನ್ನು ಹಿಡಿದು ಶಿರಚ್ಛೇದನಗೊಳಿಸಿದನು. ಇದರಿಂದ ಹರ್ಷಗೊಂಡ ಛಲದಂಕಮಲ್ಲನು ಅವನ ರುಂಡವನ್ನು ಯಜ್ಞಕುಂಡಕ್ಕೆ ಎಸೆದನು ಆಗ ಅದು ಭಸ್ಮವಾಗುವ ಮುನ್ನವೇ ನಿನಗೆ ಶಿವ ನಾಮಸ್ಮರಣೆ ಮರೆಯಾಗಲಿ,

ನಿನ್ನ ವಂಶ ವೃದ್ಧಿಯಾಗದಿರಲಿ ಎಂದು ಶಾಪವಿತ್ತನು. ನಂತರ ನಾರದ ಷಟ್ ಮುನಿಗಳ ಸಹಕಾರದಿಂದ ಛಲದಂಕನ ಶಾಪ ವಿಮೋಚನೆ ಮಾಡಿಸಿದನು ಎಂಬ ಉಲ್ಲೇಖವಿದೆ.

**ಛಲವಾದಿ ಜನಾಂಗದ ಪ್ರಾಚೀನತೆ**

ಇವರು ಭಾರತದ ಮೂಲ ನಿವಾಸಿಗಳು, ವೇದಾತೀತವಾದ ಶಿವನ ಆರಾಧಕರು, ಆದಿಶೈವಭಕ್ತರಾದ ವಿಶಿಷ್ಠ ಸಮುದಾಯ. ಪುರಾಣಪ್ರಸಿದ್ಧ ಛಲದಂಕಮಲ್ಲನ ವಂಶಸ್ಥರನ್ನು ಛಲವಾದಿ ಜನಾಂಗವೆಂದು ಕರೆಯುವರು ಇವರು ಕರ್ನಾಟಕ, ಆಂಧ್ರಪ್ರದೇಶ, ಮಹಾರಾಷ್ಟ್ರ, ತಮಿಳುನಾಡು, ಕೇರಳ ಮುಂತಾದ ರಾಜ್ಯಗಳಲ್ಲಿದ್ದಾರೆ. ಕರ್ನಾಟಕದಲ್ಲಿ ಇವರನ್ನು ಹೊಲೆಯ, ಮಾಲರು ಆದಿದ್ರಾವಿಡ, ಚಲುವಾದಿ, ತೋಟಿಗರು, ಬಲಗೈಯವರು, ಸಲಾದಿವಾಳ್ಳು ಎಂಬ ಹೆಸರುಗಳಿಂದ ಕರೆಯುತ್ತಾರೆ. ಛಲವಾದಿ ಎಂಬ ಮನೆ ಹೆಸರು ಇದ್ದರೂ ಒಟ್ಟಾರೆ ಅಸ್ಪೃಶ್ಯರೆಂದೇ ಪರಿಗಣಿಸಿದ್ದಾರೆ.

ಶಾಪಗ್ರಸ್ಥನಾಗಿದ್ದ ಛಲದಂಕನನ್ನು ನಾರದನು ಷಟ್ ಮುನಿಗಳಿಂದ ವಿಮುಕ್ತಿಗೊಳಿಸುತ್ತಾನೆ ಮತ್ತೆ ರಾಕ್ಷಸರಿಂದ ತಾನು ಶಾಪಗ್ರಸ್ಥನಾಗುತ್ತಾನೆ. ಕೊನೆಗೆ ಶಿವನ ಕೆಂಗಣ್ಣಿಗೆ ಗುರಿಯಾಗಿ ಸುಟ್ಟು ಭಸ್ಮವಾದ ಮನ್ಮಥನ ಭಸ್ಮವನ್ನು ಬಿಟ್ಟ ಗಂಗೆಯಲ್ಲಿ ಮಿಂದೆದ್ದು ಛಲದಂಕನು ಶಾಪ ವಿಮೋಚನೆಗೊಳ್ಳುತ್ತಾನೆ. ನಂತರ ಘೋರ ತಪಸ್ಸು ಮಾಡಿದ, ಆಗ ಶಿವನು ನಿನ್ನ ವಿವಾಹವು ಬ್ರಹ್ಮಕುಮಾರುಯಾದ ಮಾಯಾದೇಶೆಯೊಡನೆ ನೆಡೆಯಲಿ  ಅದೂ ಶಿವ ಪಾರ್ವತಿಯರ ಕಲ್ಯಾಣದ ಸಮಯದಲ್ಲಿ ನೆರವೇರಲಿ ಹಾಗೂ ನಿಮಗೆ ಜನಿಸುವ ವಂಶಜರು ಛಲವಾದಿ ಮತದವರಾಗಲಿ ಎಂದು ಶಿವ ವರವಿತ್ತನು. ಅಂತೆಯೇ ಬೆಂಕಿಗಾಹುತಿಯಾದ ಸತಿದೇವಿಯ ಕಾರ್ಯಗಳನ್ನೆಲ್ಲಾ ಶಿವನ ಅಣತಿಯಂತೆ ಛಲದಂಕನೇ ಮಾಡಿದನು. ಇದರಿಂದ ತೃಪ್ತಗೊಂಡ ಶಿವನು ನಂದಿಯ ಮುಂಭಾಗದಲ್ಲಿ ಗಂಟೆ ಬಟ್ಟಲು, ಲಿಂಗಮುದ್ರೆಗಳನ್ನು ಸ್ಥಾಪಿಸಿ ಅವುಗಳನ್ನು ಛಲದಂಕಮಲ್ಲನ ವಂಶಜರು ಹಿಡಿಯಬೇಕೆಂದು ಆಶೀರ್ವದಿಸಿದನು. ಇಂದಿಗೂ ಆ ವಂಶಸ್ಥರು ವಿವಿಧ ಸಂದರ್ಭಗಳಲ್ಲಿ ಈ ಕಾರ್ಯವನ್ನು ಮಾಡುತ್ತಿದ್ದಾರೆ.

ಮದುವೆಗೆ ತಾಳಿಯನ್ನು ತರಲು ಶಿವ ಬೃಹಸ್ಪತಿಯ ಬಾಮೈದ ತ್ವಷ್ಟುನೆಂಬ ಅಕ್ಕಸಾಲಿಗನಲ್ಲಿಗೆ ಹೇಳಿ ಕಳುಹಿಸಿದಾಗ ಅವನು ಕೊಡಲಿಲ್ಲವಂತೆ. ನಂತರ ಬ್ರಹ್ಮನೇ ಅಲ್ಲಿಗೆ ಹೋದ ಆಗಲೂ ಕೂಡಾ ತಾಳಿಸಿದ್ಧಪಡಿಸಿದ ನಾನೇ ಆ ವಧುವಿಗೆ ಸೂಕ್ತವರನೆಂದು ತಪ್ಪು ನುಡಿದನು. ಆಗ ಛಲದಂಕ ತನ್ನ

ಚಂದ್ರಾಯುಧ ತೆಗೆದು ಅವನ ತಲೆಗೆ ಹೊಡೆದನು ಅದು ಎರಡು ತುಂಡಾಯಿತು ಅದರಿಂದಲೇ ಬಟ್ಟಲು ಮತ್ತು ನಾಲಿಗೆಯುಳ್ಳ ಗಂಟೆಯನ್ನು ಮಾಡಿ ಅದರಲ್ಲಿ ಮಂಗಳ ಸೂತ್ರವಿರಿಸಿ ಶಿವನಲ್ಲಿಗೆ ಬಂದನು. ಛಲದಂಕ ಆ ಘಂಟೆಯನ್ನು ಎಡಗಾಲಿನಿಂದ ಮುಟ್ಟಿದ ನಂತರ ಎಲ್ಲಾ ಕಾರ್ಯಗಳು ಪ್ರಾರಂಭವಾಗಬೇಕು ಅದಕ್ಕೇ ಇಂದಿಗೂ ವೀರಶೈವ, ಶೆಟ್ಟಿ, ಬಲಿಜಿಗರೆಲ್ಲಾ ಅವರ ಜನನ ಮರಣ ಶುಭಕಾರ್ಯಗಳಿಗೆ ಛಲವಾದಿಗಳನ್ನು ಕರೆಯುತ್ತಾರೆ.

ಅವರು ಲಿಂಗ, ಬಸವ ಸಮೇತದ ಪರಿಕರಗಳೊಂದಿಗೆ ಬಂದು ಪ್ರಥಮ ಪೂಜೆ ಮಾಡುತ್ತಾರೆ ಹಾಗೂ ಮೆರವಣಿಗೆ, ಸ್ಮಶಾನ ಯಾತ್ರೆಗೂ ಛಲವಾದಿಯೇ ಮುಂದೆ ಹೋಗುವನು. ಇದನ್ನೆಲ್ಲಾ ಮೆಚ್ಚಿ ವಿಷ್ಣುವು ತನ್ನಲ್ಲಿದ್ದ ಅತಿಭಾರದ ಜಂಭೂಖ ತುತ್ತೂರಿ(ಕಹಳೆ)ಯನ್ನು ನೀಡಿದನು. ತುಂಬಾ ನೈಪುಣ್ಯತೆಯಿಂದ ಇದನವನು ನುಡಿಸಿದಾಗ ಬೇರಾವ ಕಾರ್ಯಕ್ರಮಗಳೂ ನಡೆಯದಂತಾಗಿ ಇದರಿಂದ ದೇವತೆಗಳು ಕೋಪಗೊಂಡು ಇವನನ್ನು ಭೂಮಿಯಲ್ಲಿ ಹುಟ್ಟುವಂತೆ ಶಪಿಸಿದನು. ನಂತರ ಇವನು ನಾರದನ ಮೂಲಕ ಅಗಸ್ತ್ಯಮುನಿಗಳ ಬಳಿ ಬೆಳೆದು ಛಲವಾದಿಯಾದನು. ಮಡದಿಯ ಶಾಪದಂತೆ ದೇವತೆಗಳೂ ಭೂಮಿಗೆ ಬಂದು ಶಿವನು ರೇವಣಸಿದ್ದೇಶ್ವರನಾಗಿ ಜನಿಸಿ ಶಿವ ಮತ್ತು ಛಲದಂಕರು ಮತ್ತೆ ಜೊತೆಯಾದರು. ಆಗ ಛಲದಂಕನ ಮಡದಿ ಮಾಯಾದೇಶಿಯೂ ಊರ್ವಶಿಯ ಗರ್ಭದಲ್ಲಿ ಜನಿಸಿ ಸಿದ್ಧಮ್ಮನಾಗಿ ಬೆಳೆದು ಮತ್ತೆ ವಿವಾಹವಾಗಿ ಇವರಿಗೆ ವೀರಕಂಠನೆಂಬ ಮಗು ಜನಿಸಿದನು ಅವನಿಗೆ ಪರಾಶರ ಮುನಿಯ ಮಗಳು ಸುಶೀಲೆಯೊಂದಿಗೆ ವಿವಾಹವಾಯಿತು.

**ಛಲವಾದಿ ಗುರು ಪರಂಪರೆ**

ಛಲವಾದಿ ಜನಾಂಗದವರು ಹದಿನೆಂಟು ಪಣಕ್ಕೆ ಸೇರಿದ ಶೆಟ್ಟಿ ಪಟ್ಟಣಸ್ಥರು ಇವರೇ ಪಂಚಸಿಂಹಾಸನಗಳಲ್ಲಿ ಗಂಟೆ ಬಟ್ಟಲು, ಲಿಂಗಮುದ್ರೆ ಹಿಡಿವ ಅಧಿಕಾರವಿರುವವರು. ಇವರೊಂದಿಗೆ ಸೆಟ್ಟಿ ಕುಲಸ್ಥರಾದ ಏಕಾದಶ ರುದ್ರರು, ದೇಸಾಯಿಗಳು, ಭಕ್ತ ಬಣಜಿಗಳು, ಪಂಚಾಂಗ ರುದ್ರರು ಕೂಡಾ ಅರ್ಹರಾಗಿರುತ್ತಾರೆ. ಈ ಜನಾಂಗ ಅಪವಿತ್ರರಲ್ಲ ಆಚಾರಶೀಲರಾಗಿದ್ದಾರೆ, ಅನಾದಿಕಾಲದಿಂದಲೂ ಛಲವಾದಿಗಳು ಶಿವಾಚಾರದಲ್ಲಿ ನೆಡೆದು ಬಂದಿದ್ದಾರೆ. ಶ್ರೀಶೈಲ ಮಠಕ್ಕೂ ಛಲವಾದಿಗಳೂ ಅವಿನಾಭಾವ ಸಂಬಂಧವಿದೆ, 12ನೇ ಶತಮಾನದವರಾದ ಶ್ರೀ ಜಗದ್ಗುರು ಚಂದ್ರಗುಂಡ ಶಿವಾಚಾರ್ಯರು ತಮ್ಮ ಶ್ರೀಶೈಲ ಮಠದಲ್ಲಿದ್ದ ಗುರುಕುಲದೊಳಗೆ ಅನುಭವ ಕೇಂದ್ರವನ್ನು ಸ್ಥಾಪಿಸಿ 18 ಕುಲದವರಿಗೆ ಶಿವದೀಕ್ಷೆ ಸಂಸ್ಕಾರ

ಮಾಡಿ ವೀರಶೈವರನ್ನಾಗಿಸಿದರು. ಉದಾ: ದೇವಾಂಗ, ಕವಾಡಿಗ, ಹೂಗಾರ, ಡೋಹರು ಇತ್ಯಾದಿಗಳು. ನಂತರ ಗುರುಗಳು ವೀರಶೈವರ ಮೂಲ ಪುರುಷನಾದ ವೀರಭದ್ರನ ಮೂರ್ತಿಗಳನ್ನು ಸ್ಥಾಪಿಸಿದ್ದಾರೆ.

ಚಿಕ್ಕಬಳ್ಳಾಪುರದ ವಾಪಸಂದ್ರ, ನಂದಿಬೆಟ್ಟ, ಕೋಲಾರ, ಗುಡಿಬಂಡೆ, ಗೂಳೂರು, ಹುಣಸಮಾರನಹಳ್ಳಿ, ಹಂಪೆ, ಪೆನುಗೊಂಡಗಳಲ್ಲಿ ಮಠಗಳನ್ನು ನಿರ್ಮಿಸಿ ಗೂಳೂರಿನಲ್ಲಿನ ಮಠದಲ್ಲಿ ನೆಲೆಸಿ ಛಲವಾದಿಗಳ ಅಧಿಕೃತ ಗುರುವಾದರು ನಂತರ ಕರಿಬಸವೇಂದ್ರರು ಈ ಮಹತ್ಕಾರ್ಯವನ್ನು ಮುಂದುವರಿಸಿದರು. ಮಡಿವಾಳ ಮಾಚಯ್ಯ, ಹಾಗೂ ಹಡಪದ ಅಪ್ಪಣ್ಣನಿಗೆ ವೀರಶೈವ ದೀಕ್ಷೆ ನೀಡಿದವರು ಇವರೇನೇ. ಇವರಿಂದಾಗಿ ಛಲವಾದಿ ಸಂಪ್ರದಾಯ ದಕ್ಷಿಣದಿಂದ ಉತ್ತರಕ್ಕೆ ಅಂದರೆ ನಂಜನಗೂಡು, ಉಕ್ಕಡಗಾತ್ರಿ, ಕೊಟ್ಟೂರು, ಕಲಬುರ್ಗಿ, ಬೀದರ್, ಹಾಲನಹಳ್ಳಿ, ಲಕ್ಷ್ಮೇಶ್ವರ, ಮಡಕಶಿರ ಹೀಗೆ ಸಾಗಿ ಹಲವು ಮಠಗಳು ನಿರ್ಮಾಣವಾದವು. ಕೊನೆಗೆ ಅವರು ಆಂಧ್ರ ತಮಿಳುನಾಡಿನಾದ್ಯಂತ ಸಂಚರಿಸಿ ಕೊನೆಗೆ ಗದುಗಿನಲ್ಲಿ ಐಕ್ಯರಾದರು ಅದು ಇಂದು ಡೊಂಬಳದ ತೋಂಟದಾರ್ಯರ ಮಠವಾಗಿದೆ.

ಕ್ರಿ. ಶ.405 ರಲ್ಲಿ ಭಾರತಕ್ಕೆ ಬಂದ ಚೀನಾ ದೇಶದ ಯಾತ್ರಿಕ ಫಾಹಿಯಾನನು ಶ್ರೀಶೈಲದ ಮೇಲೆ ಪಾರಾವತ ಮಠ ಎಂಬ ಹೆಸರಿನ ಮಠವಿದೆ ಎಂದು ಬರೆದಿದ್ದಾನೆ. ಇದೇ ಸೂರ್ಯಸಿಂಹಾಸನ ಇದರ ಕುರುಹಾಗಿ ಬಲಗೈ ಪಣದವರು ಮದುವೆ ಕಾರ್ಯಗಳಲ್ಲಿ ಶಿವಾಸನ ಹಾಕುವುದು ಪದ್ದತಿ. ಶ್ರೀಶೈಲದ ನಿಡುಮಾಮಿಡಿ ಮಠದಲ್ಲಿರುವ ಶಾಸನಗಳಿಂದ ತಿಳಿದು ಬರುವಂತೆ ವಿಜಯನಗರದ ಅರಸರು ಮತ್ತು ಅವರ ಸಾಮಂತರಿಗೆ ನಿಡುಮಾಮಿಡಿ ದೇಶಿಕೇಂದ್ರರು ರಾಜಗುರುಗಳಾಗಿದ್ದರಂತೆ, ಶ್ರೀಶೈಲದ ಸೂರ್ಯ ಸಿಂಹಾಸನವನ್ನು ಕಟ್ಟಿಸಿದವರು ಪಲ್ಲವರೆಂದು ತಿಳಿದು ಬಂದಿದೆ. ಇದನ್ನು ಪಾಲ್ಕುರಿಕೆ ಸೋಮನಾಥ ತನ್ನ ಪಂಡಿತಾರಾಧ್ಯ ಚರಿತ್ರೆಯ ಪರ್ವತ ಪ್ರಕ್ರಣದಲ್ಲಿ ತಿಳಿಸಿದ್ದಾನೆ. ಪಲ್ಲವರ ಕಾಲದಲ್ಲಿ ಶೈವ ಸಂಪ್ರದಾಯ ಉತ್ಕೃಷ್ಠವಾಗಿತ್ತು ಹಾಗೂ ಪಣ ವ್ಯವಸ್ಥೆ ಜಾರಿಯಾಯಿತೆಂಬ ನಂಬಿಕೆ. ಪಲ್ಲವರು ಕೋಲಾರವನ್ನಾಳಿದ್ದರಿಂದ ಛಲವಾದಿಗಳು ಇಲ್ಲಿ ಉನ್ನತ ಸ್ಥಾನ ಅಲಂಕರಿಸಿದ್ದರು. ಕೃಷ್ಣದೇವರಾಯ, ಅಚ್ಯುತರಾಯರು ಅವರ ಉಪ ರಾಜಧಾನಿಯಾದ ಪೆನುಗೊಂಡದ ಅರಮನೆಗೆ ಜಗದ್ಗುರು ಕರಿಬಸವ ಸ್ವಾಮಿಗಳನ್ನು ಬರಮಾಡಿಕೊಂಡು ಸನ್ಮಾನಿಸಿ ಒಂದು ಶಾಸನ ಬರೆಯಿಸಿಕೊಟ್ಟರು ಇದು ಛಲವಾದಿ ಮತ್ತು 18 ಪಣಸ್ಥರಿಗೆ ಅವರು ನೀಡುತ್ತಿದ್ದ ಮಹತ್ವವನ್ನು ವಿಶದಪಡಿಸುತ್ತದೆ.

ಮೈಸೂರು ಅರಸರಾದ ಚಿಕ್ಕದೇವರಾಜ ಒಡೆಯರು ಇವರನ್ನು ಗೌರವಿಸಿ ನಂಜನಗೂಡಲ್ಲಿ ಮಠವನ್ನು ಕಟ್ಟಿಸಿಕೊಟ್ಟರು. 13ನೇ ಶತಮಾನದಲ್ಲಿ ಶ್ರೀಶೈಲ ರಾಜ್ಯವಾಳುತ್ತಿದ್ದ ರೆಡ್ಡಿ ವಂಶಸ್ಥರಾದ ಪೋಕನಾಟಿರೆಡ್ಡಿ,

ಮೊರಸುಗೌಡರು, ಬೆರಳುಕೊಡುವ ಒಕ್ಕಲಿಗರು, ಚಟಮಿಟ ರೆಡ್ಡಿ, ಪಂಟರೆಡ್ಡಿಗಳು ಈ ಶ್ರೀಶೈಲ ನಿಡುಮಾಮಿಡಿ ಛಲವಾದಿ ಪೀಠದ ಶಿಷ್ಯರಾಗಿದ್ದು ಶಿವಗಂಗೆಯ ಗಂಗಾಧರಗೌಡ, ನಂದಿಯ ನಂದಿಗೌಡ, ಯಲಮಿರೆಡ್ಡಿ ಜನಾಂಗದವರು ತಮ್ಮ ಕಟ್ಟಳೆಗಳನ್ನು ಈ ಪೀಠದಲ್ಲೇ ಬಗೆಹರಿಸಿಕೊಳ್ಳುತ್ತಿದ್ದರು.

18 ಕುಲಸ್ಥರಾದ ಜನಸಾಮಾನ್ಯರನ್ನು ಸಂಸ್ಕರಿಸಿ ಪಣಕಟ್ಟನ್ನು ನಿರ್ಮಿಸಿದವರು ಕೋಲಾರ ಪ್ರಾಂತ್ಯದ ಶ್ರೀ ಚಂದ್ರಗುಂಡ ದೇಶಿಕೇಂದ್ರ ಧರ್ಮಗುರುಗಳಾಗಿದ್ದಾರೆ. 11ನೇ ಶತಮಾನದಲ್ಲಿ ಚೋಳರ ರಾಜೇಂದ್ರ ಚೋಳ ಕೋಲಾರವನ್ನು ಗೆದ್ದು ಗುರುಗಳಿಗೆ ಸಮೀಪವಾಗಿದ್ದನು. ಗುರುಗಳು ತಮ್ಮ ಪೀಠದಲ್ಲಿ ಗಾಣ, ಬಣಜಿಗರಿಗೆ ಬಳೆಗಳನ್ನು 18 ಕುಲಸ್ಥರಿಗೆ ಕುಲ ಸಾಧನಗಳನ್ನು ವಿತರಿಸುತ್ತಿದ್ದರಂತೆ. ಇಂದಿಗೂ ಇವರಿಗೆಲ್ಲ ಇವರೇ ಪೀಠಾಧ್ಯಕ್ಷರು. ನಂತರ ಕ್ರಿ. ಶ. 1242 ರ ಆರಂಭದಲ್ಲಿ ಗುಮ್ಮನಾಯಕನ ಪಾಳ್ಯದ ಪಾಳೇಗಾರರು ಮತ್ತು ಮಠಕ್ಕೆ ಅವಿನಾಭಾವ ಸಂಬಂಧವಿದೆ. ಪೀಠವೇ ಆಡಳಿತ ಮಾರ್ಗದರ್ಶನ ನೀಡುತ್ತಿತ್ತು. ಛಲವಾದಿಗಳನ್ನು ಮಠಕ್ಕೆ ಕಳುಹಿಸಬೇಕೆಂಬ ಆದೇಶ ಮತ್ತು ಪೀಠಕ್ಕೆ ಕಳುಹಿಸುವ ಅಧಿಕಾರ ಪಾಳೇಗಾರರಿಗಿತ್ತು. ಶ್ರೀಶೈಲದಿಂದ ಬಂದ ನಾಯಕರು ಗುಮ್ಮನಾಯಕನ ಪಾಳ್ಯವನ್ನು ಆಳ್ವಿಕೆ ಮಾಡುತ್ತಿದ್ದರು.

ಒಟ್ಟಾರೆ ಕೆಳಜಾತಿಗಳು, ಅಂಚಿನಲ್ಲಿರುವ ಸಮೂಹಗಳು ಹಾಗೂ ಅಸ್ಪೃಶ್ಯರೂ ಈಗ ಚಾರಿತ್ರಿಕ ಕಥನಗಳನ್ನು ಪ್ರವೇಶಿಸಿದ್ದಾರೆ. ಅವರ ಸಾಮಾಜಿಕ ನಡಾವಳಿಗಳಲ್ಲಿ ಬದಲಾವಣೆ ಬಂದಿದ್ದು ರಾಜಕೀಯ, ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕವಾಗಿ ಮುನ್ನಡೆ ಸಾಧಿಸಿ ಶ್ರಮಿಕ ವರ್ಗವೂ ಸಹಾ ಸ್ವಾಭಿಮಾನಿ ಬದುಕನ್ನು ನಡೆಸುತ್ತಿದ್ದು ಶ್ರೇಣೀಕೃತ ವ್ಯವಸ್ಥೆಯಲ್ಲಿ ತಮ್ಮ ಅಸ್ತಿತ್ವವನ್ನು ಕಟ್ಟಿಕೊಳ್ಳುವಲ್ಲಿ ಯಶಸ್ವಿಯಾಗಿದ್ದಾರೆ. ಆದರೆ ಗ್ರಾಮೀಣ ಪ್ರದೇಶಗಳಲ್ಲಿ ಈ ಸಮುದಾಯಕ್ಕೆ ಭೂಮಿ, ಶಿಕ್ಷಣ, ಉದ್ಯೋಗ, ಕೌಶಲ್ಯಗಳ ಕೊರತೆಯಿಂದ ಮೇಲ್ಜಾತಿಗಳು ಕ್ರೌರ್ಯವನ್ನು ಮೆರೆಯುತ್ತಿದ್ದು ಆರ್ಥಿಕ ಅಸಮಾನತೆ ಮತ್ತು ರಾಜಕೀಯ ಒಗ್ಗೂಡುವಿಕೆಯ ಕೊರತೆಯಿಂದ ತಳಸಮುದಾಯಗಳ ಜೀವನ ಅನಿಶ್ಚಿತತೆಯಿಂದ ಕೂಡಿದ್ದು ಉಳ್ಳವರಿಂದ ನಿಯಂತ್ರಿಸಲ್ಪಡುತ್ತಿರುವುದನ್ನು ಇಂದಿಗೂ ಕಾಣಬಹುದಾಗಿದೆ.

**ಪರಾಮರ್ಶನ ಕೃತಿಗಳು**

1. **'ತಣಿಗೆ'** (ಜಾನಪದ ಸಂಶೋಧನಾ ಲೇಖನಗಳು)., ಡಾ. ಜಿ. ಶ್ರೀನಿವಾಸಯ್ಯ., 2014., ನಿವೇದಿತ ಪ್ರಕಾಶನ, ಬೆಂಗಳೂರು.
2. **'ಪ್ರಾಚೀನ ಭಾರತದ ಇತಿಹಾಸ'**., ರೋಮಿಲಾ ಥಾಪರ್., 2016., ವಿಸ್ಮಯ ಪ್ರಕಾಶನ, ಮೈಸೂರು.

3. ಸಾಂಸ್ಕೃತಿಕ ಆಯಾಮಗಳು., ಹಿ. ಶಿ. ರಾಮಚಂದ್ರೇಗೌಡ., 1998., ಕನ್ನಡ ಪುಸ್ತಕ ಪ್ರಾಧಿಕಾರ., ಕನ್ನಡ ಭವನ, ಬೆಂಗಳೂರು 02
4. ಆಧುನಿಕ ಆದಿಮ., ಟಿ. ಗೋವಿಂದರಾಜು., 2019., ಪ್ರಸಾರಾಂಗ, ಮಾನಸ ಗಂಗೋತ್ರಿ, ಮೈಸೂರು
5. ಕರ್ನಾಟಕ ಜನಪದ ಕಲೆಗಳ ಕೋಶ., ಹಿ. ಚಿ. ಬೋರಲಿಂಗಯ್ಯ., 2002., ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
6. ಜಾನಪದ ಸಂಭ್ರಮ., ಪಿ.ಕೆ. ರಾಜಶೇಖರ., 2003., ಕನ್ನಡ ಪುಸ್ತಕ ಪ್ರಾಧಿಕಾರ., ಕನ್ನಡ ಭವನ, ಬೆಂಗಳೂರು 02.